ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಶಿವಮೊಗ್ಗ ನಗರದ ಹಳೆಯ ಪ್ರದೇಶಗಳ ಹಾಗೂ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳಿಗೆ ಸಮಗ್ರ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ರೂ. 40.00 ಕೋಟಿಗಳ ಯೋಜನೆಯನ್ನು ತಯಾರಿಸಲಾಗಿದ್ದು, ತಾಂತ್ರಿಕ ಪರಿಶೀಲನಾ ಹಂತದಲ್ಲಿದೆ. ಮೇಲಿನ ಯೋಜನೆಯನ್ನು ಜಪಾನ್ ದೇಶದ ಅಂತರಾಷ್ಟ್ರೀಯ ಸಹಕಾರ ಬ್ಯಾಂಕಿನ ಸಾಲದ ನೆರವಿನಡಿಯಲ್ಲಿ ತೆಗೆದುಕೊಳ್ಳಲು ಪ್ರಸ್ತಾವನೆಯನ್ನು ಜನವರಿ 2002 ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದುವರೆವಿಗೂ ಸಾಲ ಮಂಜೂರಾತಿಯಾಗಿರುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ಹುಡ್ಕೋ ಅಥವಾ ಇತರೆ ಹಣಕಾಸು ಸಂಸ್ಥೆಗಳ ಸಾಲದ ನೆರವಿನಡಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಶಿವಮೊಗ್ಗ ನಗರಕ್ಕೆ ಖಾಸಗೀ ಬಸ್ ಸ್ಟಾ ್ಯಂಡ್ ನಿರ್ಮಾಣಕ್ಕೆ ನಗರಸಭೆಯು ತನ್ನ ಭಾಗದ ಹಣ ಬಿಡುಗಡೆ ಕುರಿತು

310(335) - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಕ್ಕೆ ಖಾಸಗಿ ಬಸ್‌ಸ್ಟ್ಯಾಂಡ್ ನಿರ್ಮಾಣ ಮಾಡುವ ಯೋಜನೆ ಯಾವ ಹಂತದಲ್ಲಿದೆ.

ಆ) ಈ ಯೋಜನೆಗೆ ಸರ್ಕಾರದ ಮಂಜೂರಾತಿ ನೀಡಿದೆಯೇ?

ಇ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು?

ಈ) ಈ ಯೋಜನೆಗೆ ಶಿವಮೊಗ್ಗ ನಗರಸಭೆಯು: ತನ್ನ ಭಾಗದ ಹಣವನ್ನು ಬಿಡುಗಡೆ ಮಾಡಿರುವುದು ನಿಜವೇ?

ಉ) ಈ ಯೋಜನೆಗೆ ಅಗತ್ಯವಿರುವ ಜಮೀನನ್ನು ಹಸ್ತಾಂತರಿಸುವ ಕಾರ್ಯ ಯಾವ ಹಂತದಲ್ಲಿದೆ?

ಊ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ವಿವರವಾದ ಕ್ರಿಯಾ ಯೋಜನೆಯನ್ನು ಐ.ಡಿ.ಸಿ.ಕೆ. ಸಂಸ್ಥೆಯು ತಯಾರಿಸುತ್ತಿದೆ.

ಆ) ಇಲ್ಲ.

ಇ) ರೂ. 3. 81 ಕೋಟಿ.

ಈ) ಇಲ್ಲ.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಐ.ಡಿ.ಸಿ.ಕೆ. ಇವರಿಂದ ಪ್ರಾಜೆಕ್ಟ್ ವರದಿ ಬಂದ ನಂತರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.